**ಸಾಕ್ಷಿಗೆ ದಿನಾಂಕಃ06-12-2025 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: 1 ರಿಂದ 3 ನೇ ಪ್ರತಿವಾದಿಗಳ ಪರ ಶ್ರೀ.CS ವಕೀಲರಿಂದ ::**

ಗೋವಿಂದಪ್ಪ ರವರು ನನಗೆ ಚಿಕ್ಕಪ್ಪ ಆಗಬೇಕು. ಗೋವಿಂದಪ್ಪ ರವರು ಹಾಗೂ ನಾನು 15 ವರ್ಷಗಳಿಂದ ಬೇರೆ ಬೇರೆಯಾಗಿ ವಾಸ ಮಾಡಿಕೊಂಡಿರುತ್ತೇವೆ. ನನ್ನ ತಾಯಿ ಜಯಲಕ್ಷ್ಮಿ ಈಗಲೂ ಸಹ ಜೀವಂತವಾಗಿರುತ್ತಾರೆ. ನನ್ನ ತಂದೆ ತಾಯಿಗೆ ಒಟ್ಟು 3 ಜನ ಮಕ್ಕಳು. ಅವರುಗಳು ನಾನು, ಅಕ್ಕ ಸವಿತಾ ಮತ್ತು ತಂಗಿ ಶೀಲಾ ಆಗಿರುತ್ತೇವೆ. ನನ್ನ ಸಹೋದರಿಯರು ಈಗಲೂ ಸಹ ಜೀವಂತವಾಗಿರುತ್ತಾರೆ. ಈ ದಾವೆ ನಡೆಸಲು ನನ್ನ ತಾಯಿ ಹಾಗೂ ನನ್ನ ಸಹೋದರಿಯರು ನನಗೆ ಯಾವುದೇ ಅಧಿಕಾರ ಪತ್ರ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿ. ಈ ದಾವೆಯಲ್ಲಿ ನನ್ನ ತಾಯಿ ಹಾಗೂ ನನ್ನ ಸಹೋದರಿಯರು ಪಕ್ಷಗಾರರಾಗಿರುವುದಿಲ್ಲ ಎಂದರೆ ಸರಿ. ಈ ದಾವೆ ಹೂಡಲು ಮಾಹಿತಿಯನ್ನು 1 ನೇ ವಾದಿ, ನಾನು ಹಾಗೂ ನನ್ನ ತಾಯಿ ಹಾಗೂ ಸಹೋದರಿಯರು ಸೇರಿ ವಕೀಲರಿಗೆ ಮಾಹಿತಿ ನೀಡಿರುತ್ತೇವೆ. ಪ್ರತಿವಾದಿಗಳು ಈ ದಾವೆಯಲ್ಲಿ ಹೂಡಿರುವ ತಕರಾರನ್ನು ಹಾಗೂ ಅವರ ದಾಖಲಾತಿಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ದಿಃ 01.12.1978 ರಲ್ಲಿ ನನ್ನ ಅಜ್ಜ ತಳವಾರ್ ತಿಮ್ಮಪ್ಪ ರವರು ದಾವಾ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದು ಹೇಳುವ ಸಮಯದಲ್ಲಿ ನಾನು ಇನ್ನು ಜನಿಸಿರುವುದಿಲ್ಲ ಎಂದರೆ ಸರಿ. ಆಗಾಗಿ ಸದರಿ ಕ್ರಯಪತ್ರಕ್ಕೆ ಸಂಬಂಧಪಟ್ಟಂತೆ ನನಗೆ ವೈಯಕ್ತಿಕ ಮಾಹಿತಿ ಇರಲು ಸಾಧ್ಯ ಇರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಕ್ರಯಪತ್ರದ ಬಗ್ಗೆ 1 ನೇ ವಾದಿ ನನಗೆ ತಿಳಿಸಿರುತ್ತಾರೆ. ಸದರಿ ಕ್ರಯಪತ್ರಕ್ಕೆ 1 ನೇ ವಾದಿಯು ಪಕ್ಷಗಾರರಲ್ಲ ಎಂದರೆ ಸರಿ.

ಪ್ರತಿವಾದಿಗಳ ಕುಟುಂಬದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿಯ ಗಂಡನ ತಂದೆಯ ಹೆಸರು ಹಾಲಯ್ಯ ಆಗಿರುತ್ತದೆ ಎಂದರೆ ಸರಿ. ಅವರ

ತಂದೆಯ ಹೆಸರು ಮಠದ ಹಾಲಯ್ಯ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಹಾಲಯ್ಯ ರವರಿಗೆ ಚಂದ್ರಶೇಖರಯ್ಯ, ಮಲ್ಲಯ್ಯ ಹಾಗೂ ಗುರುಶಾಂತಯ್ಯ ಎನ್ನುವ ಸಹೋದರರು ಹಾಗೂ ಗಂಗಮ್ಮ ಹಾಗೂ ಮಾದಮ್ಮ ಎನ್ನುವ ಸಹೋದರಿಯರು ಇದ್ದರು ಎಂದರೆ ಸರಿ. ಹಾಲಯ್ಯನ ತಾಯಿ ಹೆಸರು ಗಂಗಮ್ಮ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ವಾದಿಯ ಗಂಡನಿಗೆ ಬಸಮ್ಮ ಎನ್ನುವ ಸಹೋದರಿ ಇದ್ದರು ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಗೆ 3 ಜನ ಗಂಡು ಮಕ್ಕಳು ಎಂದರೆ ಸರಿ. ಸದರಿಯವರು ಪ್ರಕಾಶ, ಸುರೇಶ ಮತ್ತು ದೇವರಾಜ ಎನ್ನುವವರಾಗಿರುತ್ತಾರೆ ಎಂದರೆ ಸರಿ. ಸದರಿಯವರಲ್ಲಿ ಸುರೇಶ್ ಎನ್ನುವವರು ಮೃತರಾಗಿದ್ದು ಅವರ ಹೆಂಡತಿ ಚೂಡಮಣಿ ಆಗಿದ್ದು, ಅವರ ಮಗಳ ಹೆಸರು ರಶ್ಮಿ ಆಗಿರುತ್ತದೆ ಎಂದರೆ ನನಗೆ ನಿಖರವಾಗಿ ಗೊತ್ತಿಲ್ಲ. ಸದರಿ ಚೂಡಮಣಿ ಹಾಗೂ ರಶ್ಮಿಯವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಅದೇ ರೀತಿ ದೇವರಾಜ ಎನ್ನುವವರ ಹೆಸರನ್ನು ಬಸವರಾಯ್ಯ ಎಂದು ತಪ್ಪಾಗಿ ವಾದ ಪತ್ರದಲ್ಲಿ ನಮೂದು ಮಾಡಿರುತ್ತೇವೆ ಎಂದರೆ ಸರಿ. 1 ರಿಂದ 3 ನೇ ಪ್ರತಿವಾದಿಗಳಿಗೆ ಹರಳಹಳ್ಳಿ ಹಾಗೂ ಗೋಂದಿಬಸಳ್ಳಿ ಗ್ರಾಮದಲ್ಲಿ ಅನೇಕ ಪಿತ್ರಾರ್ಜಿತ ಆಸ್ತಿ ಇರುತ್ತದೆ ಎಂದರೆ ಸರಿ. 2 ಮತ್ತು 3 ನೇ ಪ್ರತಿವಾದಿಗಳ ಮುತ್ತಜ್ಜ ಮೃತರಾದ ನಂತರ ಅವರ ಅಜ್ಜ ಹಾಗೂ ಅವರ ಸಹೋದರರು ಕುಟುಂಬದ ಆಸ್ತಿಗಳನ್ನು ಜಂಟಿಯಾಗಿ ಅನುಭವಿಸುತಾ ಬಂದಿರುತ್ತಾರೆ ಎಂದರೆ ಸರಿ.

1 ನೇ ಪ್ರತಿವಾದಿಯ ಗಂಡ ಓಂಕಾರಯ್ಯ ರವರಿಗೆ ದಾವಾ ಆಸ್ತಿ ಹಾಗೂ ಅವರ ಕುಟುಂಬದ ಆಸ್ತಿಗಳು ಯಾವ ಮೂಲದಿಂದ ಬಂದಿರುತ್ತದೆ ಎಂದರೆ ಸಾಕ್ಷಿಯು ಅವರ ಸಹೋದರರ ನಡುವೆ ಆದ ವಿಭಾಗದಲ್ಲಿ ಬಂದಿರುತ್ತದೆ ಎಂದು ನುಡಿಯುತ್ತಾರೆ. ಸದರಿ ವಿಭಾಗವನ್ನು ಯಾವುದಾದರು ದಾಖಲಾತಿಯಡಿಯಲ್ಲಿ ಮಾಡಿಕೊಂಡಿರುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಆದರೆ ಅವರ ಹೆಸರಿನಲ್ಲಿ ಆ ಸಮಯದಲ್ಲಿ ದಾವಾ ಶೆಡ್ಯೂಲ್ ಸ್ವತ್ತಿನ ಖಾತೆ ಇತ್ತು ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯ ಗಂಡ ಓಂಕಾರಯ್ಯ, ಅವರ ಚಿಕ್ಕಪ್ಪ ಚಂದ್ರಶೇಖರಯ್ಯ, ಇನ್ನೊಬ್ಬ ಚಿಕ್ಕಪ್ಪ ಮಲ್ಲಯ್ಯ ಹೆಂಡತಿ ಗಂಗಮ್ಮ ಹಾಗೂ ಇನ್ನೊಬ್ಬ ಚಿಕ್ಕಪ್ಪ ಗುರುಶಾಂತಯ್ಯ ರವರು 1985 ರಲ್ಲಿ ಜುಬಾನಿ ಪಾಲು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಅದಕ್ಕಿಂತ ಪೂರ್ವದಲ್ಲಿ ಎಲ್ಲಾ ಆಸ್ತಿಗಳನ್ನು ಒಟ್ಟು ಕುಟುಂಬದ ಆಸ್ತಿಗಳಾಗಿ ಅವರೆಲ್ಲಾ ಒಟ್ಟಿಗೆ ಅನುಭವಿಸುತ್ತಿದ್ದರು ಎಂದರೆ ಸರಿಯಲ್ಲ. 1985

ರ ಪೂರ್ವದಲ್ಲಿ ಸದರಿ ವ್ಯಕ್ತಿಗಳು ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುತ್ತಾರೆಂದು ತೋರಿಸಲು ನನ್ನ ಬಳಿ ಯಾವುದೇ ದಾಖಲಾತಿಗಳು ಇರುವುದಿಲ್ಲ. ಆ ರೀತಿ ದಾಖಲಾತಿಗಳನ್ನು ಮುಂದೆ ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. 1985 ರಲ್ಲಿ ಆದ ವಿಭಾಗದ ಅಡಿಯಲ್ಲಿ ಎಂ ಆರ್ 16/1985-86 ರಂತೆ ಸದರಿ ವ್ಯಕ್ತಿಗಳ ಹೆಸರಿಗೆ ಅವರಿಗೆ ಬಂದ ಭಾಗಕ್ಕೆ ಸಂಬಂಧಪಟ್ಟಂತೆ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸರಿ. ಸದರಿ ವಿಭಾಗದಲ್ಲಿ 1 ನೇ ಪ್ರತಿವಾದಿಯ ಗಂಡನಿಗೆ ಹರಳಹಳ್ಳಿ ಗ್ರಾಮದ ಸರ್ವೇ ನಂಬರ್ 47 ರಲ್ಲಿ 3 ಎಕರೆ 10 ಗುಂಟೆ, ಗೋಂದಿಹೊಸಳ್ಳಿ ಗ್ರಾಮದ ಸರ್ವೇ ನಂಬರ್ 19 ರಲ್ಲಿ 11 ಎಕರೆ 35 ಗುಂಟೆ ಬಂದಿರುತ್ತದೆ ಎಂದರೆ ಸರಿ. ಸದರಿ ಎರಡು ಜಮೀನುಗಳು ಅಕ್ಕಪಕ್ಕದಲ್ಲಿ ಇರುತ್ತವೆ ಎಂದರೆ ಸರಿ.

1 ನೇ ಪ್ರತಿವಾದಿಯ 3 ಜನ ಮಕ್ಕಳಲ್ಲಿ ಪ್ರಕಾಶ ಎನ್ನುವವರು 1967 ರಲ್ಲಿ ಜನಿಸಿರುತ್ತಾರೆ ಎಂದರೆ ನನಗೆ ನಿಖರವಾಗಿ ಗೊತ್ತಿಲ್ಲ. ಅದೇ ರೀತಿ ಸುರೇಶ ರವರು 1971 ರಲ್ಲಿ ಜನಿಸಿರುತ್ತಾರೆ ಎಂದರೆ ನನಗೆ ನಿಖರವಾಗಿ ಗೊತ್ತಿಲ್ಲ. ಅದೇ ರೀತಿ ದೇವರಾಜ ರವರು 1975 ರಲ್ಲಿ ಜನಿಸಿರುತ್ತಾರೆ ಎಂದರೆ ನನಗೆ ನಿಖರವಾಗಿ ಗೊತ್ತಿಲ್ಲ. ನಾನು 1 ನೇ ಪ್ರತಿವಾದಿಯ ಗಂಡನನ್ನು ನೋಡಿರುವುದಿಲ್ಲ ಎಂದರೆ ಸರಿ.

**(ಮುಂದುವರಿದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಓ

sd/-

ಪ್ರ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ, ತರೀಕೆರೆ

(ಸಂಚಾರಿ ನ್ಯಾಯಾಲಯ ಅಜ್ಜಂಪುರ)

ಸಾಕ್ಷಿಯ ಸಹಿ: